ಇ) ಹೌದು, ಸರ್ಕಾರದ ಗಮನಕ್ಕೆ ಬಂದಿದೆ.

ಈ) ಸರ್ಕಾರದಿಂದ ಮೃತನ ಮನೆಯವರಿಗೆ ಒಟ್ಟು ರೂ. 29,404-00 ಕೊಡಲಾಗಿದೆ. ಅಲ್ಲದೆ ಯುನೈಟೆಡ್ ಇನ್ಷ್ಯೂರೆನ್ಸ್ ಕಂಪನಿಗೆ 1 ಲಕ್ಷ ರೂ.ಗಳ ಮಂಜೂರಾತಿಗಾಗಿ ಪತ್ರ ವ್ಯವಹಾರ ನಡೆಸಲಾಗಿದೆ ಹಾಗೂ ಮೃತರ ಕುಟುಂಬದವರಿಗೆ ವಿಶೇಷ ಎಕಸ್ಗ್ರೇಷಿಯಾ ಹಣವನ್ನು ನೀಡುವ ಬಗ್ಗೆಯೂ ಪರಿಶೀಲಿಸಲಾಗುತ್ತಿದೆ.

ಉ) ಇಲ್ಲ.

ಊ) ಈ ಪ್ರಕರಣವನ್ನು ಈಗಾಗಲೇ ಸಿ.ಓ.ಡಿ. ವಿಭಾಗಕ್ಕೆ ವಹಿಸಿದ್ದು, ತನಿಖಾ ಕಾರ್ಯ ಹಾಗೂ ಅಪರಾಧಿಗಳನ್ನು ಪತ್ತೆ ಹಚ್ಚುವ ಕಾರ್ಯ ಭರದಿಂದ ನಡೆಯುತ್ತಿದೆ.

ಋ) ನಿಯಮಾನುಸಾರ ಅನುಕಂಪದ ಆಧಾರದ ಮೇಲೆ ಮೃತನ ಪತ್ನಿಗೆ ಸರ್ಕಾರಿ ನೌಕರಿ ಕೊಡುವ ಬಗ್ಗೆ ಪರಿಶೀಲಿಸಲಾಗುವುದು.

ಋೂ) ಬೀದರ್ ಪಟ್ಟಣದಲ್ಲಿ ಮುಖ್ಯ ಪೇದೆ ಹಾಗೂ ಪೇದೆಗಳನ್ನೊಳಗೊಂಡಂತೆ ರಾತ್ರಿ ಗಸ್ತನ್ನು ನಿಯೋಜಿಸಲಾಗಿದ್ದು ಇಂತಹ ಘಟನೆಗಳು ನಡೆಯದ ಹಾಗೆ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ. ಇದೇ ರೀತಿಯಾಗಿ ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಗಳಿಗೆ ಸೂಕ್ತ ರೀತಿಯ ತಿಳುವಳಿಕೆ ನೀಡಲಾಗಿದೆ. ಬೀದರ್ ಪಟ್ಟಣವನ್ನು 3 ಭಾಗಗಳನ್ನಾಗಿ ಮಾಡಿ ಪೊಲೀಸ್ ಉಪ ನಿರೀಕ್ಷಕರ ನೇತೃತ್ವದಲ್ಲಿ ಇಡೀ ರಾತ್ರಿ ನಗರದಲ್ಲಿ ಸಂಚರಿಸಿ, ಇಂತಹ ಪ್ರಕರಣಗಳು ನಡೆಯದ ಹಾಗೆ ನೋಡಿಕೊಳ್ಳಲು ನಿಯೋಜಿಸಲಾಗಿದೆ.

ರಾತ್ರಿಯ ವೇಳೆ ಈಗಾಗಲೇ ನಿಯೋಜಿಸಿರುವ ಪಡೆಗಳು ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿರುತ್ತವೆಯೇ ಎಂಬುದನ್ನು ಪರೀಕ್ಷಿಸಲು ಉಪ ಆರಕ್ಷಕಾಧೀಕ್ಷಕರ ನೇತೃತ್ವದಲ್ಲಿ ಪಡೆಯನ್ನು ನಿಯೋಜಿಸಲಾಗಿದೆ.

ಬಸವಕಲ್ಯಾಣವನ್ನು ಪ್ರವಾಸಿಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವುದರ ಬಗ್ಗೆ

352 - ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ಪ್ರವಾಸೋದ್ಯಮ ಹಾಗೂ ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1993-94ರಲ್ಲಿ ಸರ್ಕಾರವು ಬಸವಕಲ್ಯಾಣದಲ್ಲಿ ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿ ಪಡಿಸಲುಕೈಗೊಂಡಿರುವ ಕಾರ್ಯಕ್ರಮಗಳೇನು?*

ಆ) *1993-94ರಲ್ಲಿ ಬಸವಕಲ್ಯಾಣದಲ್ಲಿ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಗಾಗಿ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು?*

ಇ) *1993-4ರಲ್ಲಿ ಕೇಂದ್ರ ಸರ್ಕಾರದಿಂದ ಪ್ರವಾಸಿಸ್ಥಳದ ಅಭಿವೃದ್ಧಿಗಾಗಿ ಮಂಜೂರಾದ ಹಣವೆಷ್ಟು?*

ಈ) *ಬಸವಕಲ್ಯಾಣದಲ್ಲಿ ಪ್ರವಾಸಿಗರಿಗೆ ಹೆಚ್ಚಿನ ಸೌಲಭ್ಯ ಒದಗಿಸಲು ಸಮಗ್ರ ಯೋಜನೆಯನ್ನು ಸರ್ಕಾರ ತಯಾರಿಸಿ ಕೇಂದ್ರಕ್ಕೆ ಕಳುಹಿಸಿದೆಯೆ?*

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು):

ಅ) ಭಾರತ ಸರ್ಕಾರ 1993-94ನೇ ಸಾಲಿನಲ್ಲಿ ಬಸವಕಲ್ಯಾಣದ ಈ ಕೆಳಕಂಡ ಯೋಜನೆಗಳನ್ನು ಆದ್ಯತಾ ಪಟ್ಟಿಯಲ್ಲಿ ಸೇರಿಸಿದೆ.

		ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)
1)	ಪ್ರವಾಸಿ ಸಂಕೀರ್ಣ	40.00
2)	ದೃಶ್ಯ ಮತ್ತು ಶ್ರವಣ ಯೋಜನೆ	30.00
3)	ಸುಲಭ ಶೌಚಾಲಯ	4.00

ಆ) ಇಮವರೆಗೆ ಹಣ ಬಿಡುಗಡೆ ಮಾಡಿಲ್ಲ.

ಇ) 1993-94ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ರೂ. 45.00 ಲಕ್ಷಗಳನ್ನು ಮಂಜೂರು ಮಾಡಿರುತ್ತದೆ.

ಈ) ಇಲ್ಲ.

ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ ಆಹಾರ ಧಾನ್ಯ ವಿತರಣೆ ಆಗದಿರುವುದು.

45 - ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಲ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಳ್ಳಾಲ ವಿಧಾನ ಸಭಾ ಕ್ಷೇತ್ರದ ಯಾವ ಯಾವ ನ್ಯಾಯ ಬೆಲೆ ಅಂಗಡಿಗಳಲ್ಲಿ ಆಹಾರ ಧಾನ್ಯ ಮತ್ತು ಸೀಮೆಎಣ್ಣೆ ಮತ್ತು ಪಾಮೋಲಿನ್ ಎಣ್ಣೆ ಸರಿಯಾಗಿ ವಿತರಣೆಯಾಗದೇ ತೊಂದರೆಯಾಗಿರುವುದಾಗಿ ದೂರುಗಳೂ ಸರ್ಕಾರಕ್ಕೆ ಬಂದಿವೆಯೇ? (ವಿವರ ಕೊಡುವುದು)

ಆ) ವ್ಯವಸ್ಥಿತವಾಗಿ ಆಹಾರ ಪದಾರ್ಥಗಳು, ಸೀಮೆಎಣ್ಣೆ ವಿತರಣೆ ಮಾಡದೇ ತೊಂದರೆ ಮಾಡಿದ ನ್ಯಾಯ ಬೆಲೆ ಅಂಗಡಿಗಳನ್ನು ಬದಲಾಯಿಸಲಾಗುವುದೇ?

ಇ) ಸರಿಯಾಗಿ ನಡೆಸುವವರಿಗೆ ಲೈಸೆನ್ಸ್ ಕೊಡಲಾಗುವುದೇ?

ಈ) ದೂರುಗಳು ಬಂದಿರುವ ನ್ಯಾಯಬೆಲೆ ಅಂಗಡಿಗಳ ಮಾಲೀಕರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಇಲ್ಲ.

ಆ) ಹೌದು.

ಇ) ಹೊಸ ನ್ಯಾಯ ಬೆಲೆ ಅಂಗಡಿ ಅವಶ್ಯಕತೆ ಕಂಡುಬಂದಲ್ಲಿ, ಕರ್ನಾಟಕ ಅಗತ್ಯ ವಸ್ತುಗಳ (ಪಿಡಿಎಸ್) ಕಂಟ್ರೋಲ್ ಆರ್ಡರ್ 1992 ಮೇರೆಗೆ ಪರಿಶೀಲಿಸಿ ಪ್ರಾಧಿಕಾರ ನೀಡಲಾಗುವುದು.

ಈ) ಯಾವುದೇ ನ್ಯಾಯ ಬೆಲೆ ಅಂಗಡಿಗಳಲ್ಲಿ ಸಮರ್ಪಕವಾಗಿ ವಿತರಣೆ ಮಾಡುತ್ತಿಲ್ಲವೆಂದು ದೂರುಗಳು ಬಂದಲ್ಲಿ, ಕಾನೂನಿನಂತೆ ತನಿಖೆಗೆ ಒಳಪಡಿಸಿ, ಕ್ರಮ ಕೈಗೊಳ್ಳಲಾಗುತ್ತದೆ. ಅಂತಹ ಸಂದರ್ಭದಲ್ಲಿ ವಿತರಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಪರ್ಯಾಯ ವ್ಯವಸ್ಥೆ ಮಾಡಲಾಗುತ್ತದೆ.

ಮೈಸೂರು ಸಕ್ಕರೆ ಕಾರ್ಖಾನೆಯ ಹೊಗೆ ಚಿಮಣಿಯಿಂದ ಬರುವ ಕಾರ್ಬನ್ ಕಣಗಳನ್ನು ತಡೆಗಟ್ಟುವ ಬಗ್ಗೆ

264 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ವಿಜ್ಞಾನ ಮತ್ತು ಯಂತ್ರಕಲಾ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?